ಗಿರಿಜನರಿಗೆ ಸೇರುವುದರಿಂದ ಸರ್ಕಾರದವರು ಯಾವ ಯಾವ ಉದ್ದೇಶಕ್ಕಾಗಿ ಹಣಸಹಾಯವನ್ನು ಮಾಡಬೇಕೆಂದು ಆದೇಶವನ್ನು ಕೊಟ್ಟಿದ್ದಾರೆಯೋ ಅದರಂತೆ ಅವರು ಕೊಟ್ಟಿದ್ದಾರೆ. ಇತರೆ ಇಲಾಖೆಗಳಿಂದಲೂ ಕೂಡ ನಬ್ ಪ್ಲಾನ್ ಎಂದು ಹೇಳಿ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ರಾಜ್ಯಗಳಿಗಿಂತಲೂ ಮೊದಲ ನೆಯದಾಗಿ ಈಗಾಗಲೇ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದಾರೆ 5ನೇ ಪಂಚವಾರ್ಷಿಕ ಯೋಜನಾವಧಿಯಲ್ಲಿ ಈಗಾಗಲೇ ಸುಮಾರು 26 ಕೋಟಿಗಿಂತಲೂ ಹೆಚ್ಚಿಗೆ 5 ವರ್ಷಗಳಅವಧಿಯಲ್ಲಿ ಎಲ್ಲಾ ಇಲಾಖೆಗಳಿಂದಲೂ ಕೂಡ ಇಂಡಿವಿಜುಯಲ್ಸ್ ಮತ್ತು ಇನ್‌ಸ್ಟಿಟ್ಯೂಷನ್ ತೆಗೆದುಹಾಕಿ ಹಣಸಹಾಯವನ್ನು ಏನು ಮಾಡುತ್ತಾರೆಯೋ ಅಂತಹ ಕಡೆಗಳಲ್ಲಿ ಹರಿಜನ ಗಿರಿಜನರಿಗೂ ಕೊಡಬೇಕೆಂದು ತೀರ್ಮಾನವಾಗಿದೆ. ಆ ಹಣವನ್ನು ಖರ್ಚು ಮಾಡಿಲ್ಲ. ಎಲ್ಲಾ ಇಲಾಖೆಗಳಿಂದಲೂ ಕೂಡ ಖರ್ಚು ಮಾಡತಕ್ಕದ್ದು ಎಂದು ಸರ್ಕಾರ ಒಪ್ಪಿರುವುದರಿಂದ ಮುಂದಿನ ವರ್ಷದಿಂದ ಜಾರಿಗೆಕೊಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್ —ಸ್ವಾಮಿ, ಇಲ್ಲಿ ತಾವು ಒದಗಿಸಿರತಕ್ಕಂಥ ಪೆಚ್ಚಿದ ಪಟ್ಟಿಯನ್ನು ಕಡೂರು ತಾಲ್ಲೂಕಿಗೆ 1974-75ನೇ ಸಾಲಿಗೆ ಏನು ಕೊಟ್ಟಿಲ್ಲ. ಅದಕ್ಕೆ ಏನು ಕಾರಣ ? ಅಲ್ಲಿ 18 ಪರ್ಸೆಂಟ್ ರಿಸರ್ವ್ ಮಾಡಿದ್ದಾರೆಯೇ ಇಲ್ಲವೇ ? ಹಾಗೆ ಮಾಡದೇ ಇದ್ದರೆ ಅವರ ಮೇಲೆ ಏನಾದರೂ ಶಿಕ್ಷೆ ವಿಧಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ? ಏಕೆಂದರೆ ಸರ್ಕಾರದ ಸೂಚನೆಗಳನ್ನು ಆರ್ಡರ್‌ಗಳನ್ನು ಉಲ್ಲಂಘನೆ ಮಾಡಿರುವವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್ ರಾಚಯ್ಯ.—ಮಾನ್ಯಸದಸ್ಯರು ಎಷ್ಟು ಜನ ಇರುತ್ತಾರೋ, ಪ್ರಜ್ಞಾಪ್ರಭುತ್ವದಲ್ಲಿ ಎಷ್ಟು ಜಾಗ್ರತೆರಾಗಿ ಸರ್ಕಾರದವರು ಕಾನೂನುಗಳನ್ನು, ಕಾರ್ಯಕ್ರಮಗಳನ್ನು ಜಾರಿಗೆ ಕೊಡುತ್ತಾರೆಯೋ ಅವುಗಳನ್ನು ಕೆಲವು ಸ್ವಯೇಯ ಸಂಸ್ಥೆಗಳು ಜಾರಿಗೆ ಕೊಟ್ಟಿಲ್ಲ ಎಂದರೆ ಜಾರಿಗೆ ಕೊಡುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—ಹಣವನ್ನು ಒದಗಿಸಿಲ್ಲ ಎನ್ನುವುದಕ್ಕೆ ಉತ್ತರವನ್ನೇ ಹೇಳಲಲ್ಲ ? ಹಣವನ್ನು ಏತಕ್ಕೆ ಒದಗಿಸಿಲ್ಲ ?

ಶ್ರೀ ಎನ್. ರಾಚಯ್ಯ.—ಹಣ ಒದಗಿಸುವುದಕ್ಕೆ ಒಂದು ಆದೇಶ ಇದೆ. ಅಲ್ಲಿ ಹಣ ಖರ್ಚಾಗದೇ ಇರುವುದಕ್ಕೆ ಕಾರಣ ಏನು ಎಂದು ವಿವರಣೆ ಕೇಳಬೇಕಾಗಿದೆ.

Seniority List of Official of Sea Island Cotton Scheme

462. SRI S. M. SHEERNALY CHANDRASEKHAR (Hosanagar).—Will the Minister for Agriculture and Animal Husbandry be pleased to state:-

(*a*) whether it is a fact that the Seniority of the Officials of Sea Island Cotton Scheme, absorbed in the State Services from April 1963 has not been finalised so far in spite of High Court decision during September, 1973;

(*b*) if so, the action taken or proposed to be taken to finalise the issue ?

SRI N. CHIKKE GOWDA (Minister for Agriculture and Animal Husbandry).—

(*a*) Yes.

(*b*) The matter is under consideration of Government.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—1963ನೇ ಸಾಲಿನಿಂದಲೂ ಈ ಸಮಸ್ಯೆ ತಮ್ಮ ಇಲಾಖೆಯಲ್ಲಿದೆ. ಈ ರೀತಿ ಇಷ್ಟೊಂದು ವಿಳಂಬವಾಗಿರುವುದರಿಂದ ಅಧಿಕಾರಿಗಳಲ್ಲಿ ಒಂದು ರೀತಿಯ ಮಾನಸಿಕ ಕ್ಲೇಷ ಉಂಟಾಗಿ ಕೆಲಸ ನಿರ್ವಹಣೆಗೆ ಕಷ್ಟವಾಗುವುದಿಲ್ಲವೆ ಸ್ವಾಮಿ ?

†ಶ್ರೀ ಎನ್. ಚಿಕ್ಕೇಗೌಡ.—ಅಷ್ಟೇ ಮಾನಸಿಕ ಕ್ಲೇಷ ಸರ್ಕಾರಕ್ಕೂ ಸಹ ಇದೆ. ಇದರಿಂದ ಸಮಸ್ಯೆಗಳು ಉದ್ಭವಿಸಿರುವುದರಿಂದ ಅನೇಕ ಸಮಸ್ಯೆಗಳು ಇರುವ ಈ ಕಾಲದಲ್ಲಿ ಸರ್ಕಾರ ತೀರ್ಮಾನ ತೆಗೆದುಕೊಂಡಿರುವುದನ್ನು ಕೋರ್ಟಿನಲ್ಲಿ ಪ್ರಶ್ನೆ ಮಾಡಿ ರಿಟ್ ಪಿಟಿಷನ್ಸ್ ಹಾಕಿ ತೀರ್ಮಾನವಾಗಿದೆ ಮತ್ತು ಅವುಗಳಿಗೆ ಅಷ್ಟೇ ಕ್ಲಿಷ್ಟಸಮಸ್ಯೆಗಳು ಉದ್ಭವವಾಗಿವೆ. ಈಗ ರೂಲ್ಸ್ ಬದಲಾವಣೆ ಮಾಡಬೇಕಾದ್ದು ಇದೆ. ಆದ್ದರಿಂದ ಈಗಾಗಲೇ ಎಲ್ಲ ಅಂಕಿಅಂಶಗಳನ್ನು ತರಿಸಿದ್ದೇವೆ. ರೂಲ್ಸ್ ಫಾರಮ್ ಮಾಡುತ್ತಿದ್ದೇವೆ. ಅವರಿಗೆ ನ್ಯಾಯವಾಗಿ ಬಡ್ತಿ ಮತ್ತು ಇತರೆ ಸೌಲಭ್ಯಗಳು ಏನೇನು ಬರಬೇಕೊ ಅವನ್ನು ಕೊಡುತ್ತೇವೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ರೂಲ್ಸ್ ಫಾರಂ ಮಾಡಿ, ವಿನಿಯೋಗವಾಗಿ ಮಾಡಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಎಷ್ಟು ದಿವಸ ಬೇಕು ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಎಷ್ಟು ದಿವಸಗಳಾಗುತ್ತವೆ ಎಂದು ಹೇಳುವುದಕ್ಕಾಗುವುದಿಲ್ಲ. ಆದಷ್ಟು ಜಾಗ್ರತೆ ತೀರ್ಮಾನ ಮಾಡುತ್ತೇವೆ ಎಂದು ಮಾತ್ರ ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

Exemption of Surcharge on Tractors

485. SRI M. B. RAMASWAMY (Anekal).—Will the Minister for Finance and Housing be pleased to state:—

(*a*) whether Government have exempted surcharge only to Tractors ;

(*b*) if so, whether the Government have received any complaints in this behalf ;

(*c*) the nature of complaints ?

SRI M. Y. GHORPADE (Minister for Finance and Housing).—

(*a*) There is no surcharge leviable on Sales Tax.

(*b*) Does not arise.

(*c*) Does not arise.

ಶ್ರೀ ಎಂ. ಬಿ. ರಾಮಸ್ವಾಮಿ.—ಅಧ್ಯಕ್ಷರೆ, ಪ್ರಶ್ನೆ ಕೇಳತಕ್ಕದ್ದು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟದ್ದು. ಟ್ರಾಕ್ಟರ್‌ಗೆ ಮೇಲ್ತೆರಿಗೆಯಿಂದ ವಿನಾಯಿತಿ ಕೊಟ್ಟಿದ್ದಾರೆ ಡೀಸೆಲ್ ಪಂಪ್‌ಗೆ ಕೊಟ್ಟಿಲ್ಲ ಎಂಬ ಉದ್ದೇಶದಿಂದ ಪ್ರಶ್ನೆ ಕೇಳಿರುವುದು.

ಅಧ್ಯಕ್ಷರು.—ಈಗ ಮಾನ್ಯ ಸದಸ್ಯರು ನಮ್ಮ ಪ್ರಶ್ನೆ ಏನು ಎಂಬುದನ್ನು ಹೇಳಬೇಕು.

ಶ್ರೀ ಎಂ ಬಿ ರಾಮಸ್ವಾಮಿ —ನಾನು ಕೇಳುವುದೇನೆಂದರೆ ಟ್ರಾಕ್ಟರುಗಳನ್ನು ಏನು ರೈತರು ಇಟ್ಟಿದ್ದಾರೆ ಅವರಿಗೆ ತೆರಿಗೆ ವಿನಾಯಿತಿ ಕೊಟ್ಟಿದ್ದೀರಿ. ಡೀಸೆಲ್ ಪಂಪ್‌ಗೆ ವಿನಾಯಿತಿ ಮಾಡಿಲ್ಲ. ಅದಕ್ಕೇನಾದರೂ ವಿನಾಯಿತಿ ಮಾಡುತ್ತೀರಾ ?

†ಶ್ರೀ ಎನ್. ಚಿಕ್ಕೇಗೌಡ —ಇತ್ತೀಚಿನ ಗೌರ್ನಮೆಂಟ್ ಆರ್ಡರ್ ಪ್ರಕಾರ ಪಂಪ್‌ಸೆಟ್ಸಿಗೆ ಸಾಲ ತೆಗೆದುಕೊಂಡಿರುವುದಕ್ಕೆ ಪೀನರ್ ಇಂಟರೆಸ್ಟ್ ಮನ್ನಾ ಮಾಡುತ್ತೇವೆ.